# Akashvani : Bangalore
# National Bulletin In Kannada
# 16.03.2024 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**16.03.2024 / 19.35 hrs**

**<><*<><>*><>**

<u>ಮುಖ್ಯಾಂಶಗಳು</u>

೧. ಕೇಂದ್ರ ಚುನಾವಣಾ ಆಯೋಗದಿಂದ ೧೮ನೇ ಲೋಕಸಭೆಗಾಗಿ ಏಳು ಹಂತದ ಚುನಾವಣಾ ವೇಳಾಪಟ್ಟಿ ಪ್ರಕಟ

೨. ಮುಕ್ತ ನ್ಯಾಯಸಮ್ಮತ ಚುನಾವಣೆಗಾಗಿ ಚುನಾವಣಾ ಆಯೋಗ ಸನ್ನದ್ಧ; ಆಯುಕ್ತ ರಾಜೀವ್ ಕುಮಾರ್

೩. ದೇಶದಲ್ಲಿ ೯೭ ಕೋಟಿ ನೊಂದಾಯಿತ ಮತದಾರರು, ಹತ್ತುವರೆ ಲಕ್ಷಕ್ಕೂ ಅಧಿಕ ಮತಗಟ್ಟೆಗಳು

೪. ರಾಜಕೀಯ ಪಕ್ಷಗಳಿಂದ ಚುನಾವಣಾ ವೇಳಾಪಟ್ಟಿ ಸ್ವಾಗತ

೫. ಎಲ್ಲ ರಂಗಕ್ಕೆ ಉತ್ತಮ ಆಡಳಿತ ಹಾಗೂ ಸೇವೆಯೇ ಜನತೆಯ ಮುಂದೆ ಹೋಗಲು ಆಧಾರ - ಬಿಜೆಪಿ ಹಿರಿಯ ಧುರೀಣ ಪ್ರಧಾನಮಂತ್ರಿ ನರೇಂದ್ರ ಮೋದಿ

೬. ಕಾಂಗ್ರೆಸ್ ಪಕ್ಷದಿಂದ ೨ ನ್ಯಾಯ್ ಗ್ಯಾರಂಟಿ ಘೋಷಣೆ- ಮಲ್ಲಿಕಾರ್ಜುನ ಖರ್ಗೆ

**<><*<><>*><>**

ಕೇಂದ್ರ ಚುನಾವಣಾ ಆಯೋಗ ೧೮ನೇ ಲೋಕಸಭೆಗಾಗಿ ಏಳು ಹಂತದ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದೆ. ಮತದಾನಗಳು ಏಪ್ರಿಲ್ ೧೯, ಏಪ್ರಿಲ್ ೨೬, ಮೇ ೭, ಮೇ ೧೩, ಮೇ ೨೦, ಮೇ ೨೫ ಹಾಗೂ ಜೂನ್ ೧ ರಂದು ನಡೆಯಲಿವೆ. ಮತ ಎಣಿಕೆ ಜೂನ್ ೪ ರಂದು ನಿಗದಿಯಾಗಿದೆ. ಚುನಾವಣಾ ಮಾದರಿ ನೀತಿ ಸಂಹಿತೆ ತಕ್ಷಣದಿಂದ ಜಾರಿಗೆಬಂದಿದೆ. ನವದೆಹಲಿಯಲ್ಲಿಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಸುದ್ದಿಗೋಷ್ಠಿಯಲ್ಲಿ ಚುನಾವಣಾ ವೇಳಾಪಟ್ಟಿ ಬಿಡುಗಡೆ ಮಾಡಿದರು. ಮೊದಲ ಹಂತದಲ್ಲಿ ೧೦೨ ಲೋಕಸಭಾ ಸ್ಥಾನಗಳಿಗಾಗಿ ಏಪ್ರಿಲ್ ೧೯ ರಂದು, ಎರಡನೇ ಹಂತದಲ್ಲಿ ೮೯ ಸ್ಥಾನಗಳಿಗಾಗಿ ಏಪ್ರಿಲ್ ೨೬ ರಂದು, ಮೂರನೇ ಹಂತದಲ್ಲಿ ೯೪ ಸ್ಥಾನಗಳಿಗಾಗಿ, ಮೇ ೭ ರಂದು ನಾಲ್ಕನೇ ಹಂತದಲ್ಲಿ ೯೬ ಸ್ಥಾನಗಳಿಗಾಗಿ ಮೇ ೧೩ ರಂದು ಮತದಾನ ನಡೆಯಲಿವೆ. ಐದನೇ ಹಂತದಲ್ಲಿ ೪೯ ಲೋಕಸಭಾ ಕ್ಷೇತ್ರಗಳಿಗೆ ಮೇ ೨೦ ರಂದು ಹಾಗೂ ಆರನೇ ಹಂತದಲ್ಲಿ ೫೭ ಸ್ಥಾನಗಳಿಗೆ ಮೇ ೨೫ ರಂದು ಹಾಗೂ ಕೊನೆಯ ಮತ್ತು ಏಳನೇ ಹಂತದಲ್ಲಿ ೫೭ ಲೋಕಸಭಾ ಕ್ಷೇತ್ರಗಳಿಗಾಗಿ ಜೂನ್ ೧ ರಂದು ಮತದಾನ ನಿಗದಿಯಾಗಿದೆ.

ಗುಜರಾತ್, ತಮಿಳುನಾಡು, ಪಂಜಾಬ್, ತೆಲಂಗಾಣ, ಕೇರಳ, ಹರಿಯಾಣ, ಹಿಮಾಚಲ ಪ್ರದೇಶ, ದೆಹಲಿ, ಮೇಘಾಲಯ, ನಾಗಾಲ್ಯಾಂಡ್ ಸೇರಿದಂತೆ ೨೨ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಏಕಹಂತದ ಚುನಾವಣೆ ನಡೆಯಲಿದೆ. ಕರ್ನಾಟಕ, ರಾಜಸ್ತಾನ, ಮಣಿಪುರ ಮತ್ತು ತ್ರಿಪುರಾಗಳಲ್ಲಿ ಎರಡು ಹಂತದ ಮತದಾನವಿರುತ್ತದೆ. ಛತ್ತೀಸ್‌ಗಢ ಮತ್ತು ಅಸ್ಸಾಂನಲ್ಲಿ ಮೂರು ಹಂತದಲ್ಲಿ ಲೋಕಸಭಾ ಚುನಾವಣೆಗಳು ನಡೆಯಲಿವೆ. ಮಧ್ಯಪ್ರದೇಶ ಮತ್ತು ಜಾರ್ಖಂಡ್ ನಾಲ್ಕು ಹಂತಗಳಲ್ಲಿ ಹಾಗೂ ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರಗಳಲ್ಲಿ ಐದು ಹಂತಗಳಲ್ಲಿ ಮತದಾನ ನಡೆಯುತ್ತದೆ.  ಉತ್ತರಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಏಳು ಹಂತಗಳಲ್ಲಿ ಮತದಾನ ನಿಗದಿಯಾಗಿದೆ ಎಂದು ಚುನಾವಣಾ ಆಯುಕ್ತರು ತಿಳಿಸಿದರು. ಸಿಕ್ಕಿಂ, ಒಡಿಶಾ, ಆಂಧ್ರಪ್ರದೇಶ ಮತ್ತು ಅರುಣಾಚಲ ಪ್ರದೇಶಗಳ ವಿಧಾನಸಭಾ ಚುನಾವಣಾ ವೇಳಾಪಟ್ಟಿಯನ್ನೂ ಆಯುಕ್ತರು ಪ್ರಕಟಿಸಿದ್ದಾರೆ.  ೩೨ ಸದಸ್ಯ ಬಲದ ಸಿಕ್ಕಿಂ ವಿಧಾನಸಭೆ, ೬೦ ಸದಸ್ಯ ಬಲದ ಅರುಣಾಚಲ ಪ್ರದೇಶ ವಿಧಾನಸಭೆ ಚುನಾವಣೆಗಳು ಏಪ್ರಿಲ್ ೧೯ ರಂದು ಲೋಕಸಭೆಯ ಚುನಾವಣೆಯೊಂದಿಗೆ ಒಂದೇ ಹಂತದಲ್ಲಿ ನಡೆಯಲಿವೆ. ೧೭೫ ಸದಸ್ಯ ಬಲದ ಆಂಧ್ರಪ್ರದೇಶ, ವಿಧಾನಸಭೆಯ ಮತದಾನ ಮೇ ೧೩ ರಂದು ಲೋಕಸಭೆಯ ಮತದಾನದೊಂದಿಗೆ ಒಂದೇ ಹಂತದಲ್ಲಿ ನಡೆಯಲಿದೆ.

೧೪೭ ಸದಸ್ಯ ಬಲದ ಒಡಿಶಾ ವಿಧಾನಸಭೆಗಾಗಿ ಮೇ ೧೩, ೨೦, ೨೫ ಹಾಗೂ ಜೂನ್ ೧ ರಂದು ಲೋಕಸಭೆ ಮತದಾನದೊಂದಿಗೆ ನಾಲ್ಕು ಹಂತದಲ್ಲಿ ಮತದಾನ ನಡೆಯಲಿದೆ. ಭಾರತದ ಅತಿ ದೊಡ್ಡ ಪ್ರಜಾತಂತ್ರ ಉತ್ಸವಕ್ಕಾಗಿ ಚುನಾವಣಾ ಆಯೋಗ ಸಂಪೂರ್ಣ ಸಿದ್ಧವಾಗಿದೆ ಎಂದು ತಿಳಿಸಿದ ಮುಖ್ಯ ಚುನಾವಣಾ ಆಯುಕ್ತರು, ದೇಶದಲ್ಲಿ ೯೭ ಕೋಟಿ ನೊಂದಾಯಿತ ಮತದಾರರಿದ್ದಾರೆ. ಹತ್ತುವರೆ ಲಕ್ಷಕ್ಕೂ ಅಧಿಕ ಮತಗಟ್ಟೆಗಳನ್ನು ನಿರ್ಮಿಸಲಾಗುತ್ತಿದ್ದು, ಒಂದುವರೆ ಕೋಟಿಗೂ ಅಧಿಕ ಸಿಬ್ಬಂದಿ ಇದನ್ನು ನಿರ್ವಹಿಸಲಿದ್ದಾರೆ ಎಂದು ತಿಳಿಸಿದರು. ಮತದಾರರಲ್ಲಿ ೧ ಕೋಟಿ ೮೨ ಲಕ್ಷ ಹೊಸಬರು ಇದ್ದಾರೆ. ೮೫ ವರ್ಷಕ್ಕೂ ಹೆಚ್ಚಿನ ವಯೋಮಾನದ ಹಿರಿಯ ಮತದಾರರಿಗೆ ಹಾಗೂ ವಿಶೇಷ ಚೇತನರಿಗೆ ಮನೆಯಿಂದಲೇ ಮತದಾನ ಮಾಡಲು ಇದೇ ಮೊದಲ ಬಾರಿಗೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ಚುನಾವಣಾ ಆಯುಕ್ತರು ತಿಳಿಸಿದರು. ಮತದಾನಕ್ಕೆ ಅಗತ್ಯವಾಗಿರುವ ಇವಿಎಂ ಮತ್ತು ವಿವಿ ಪ್ಯಾಟ್ಸ್ ಯಂತ್ರಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿದ್ದು, ಮತದಾನ ಸರಾಗವಾಗಿ ನಡೆಯುವುದನ್ನು ಖಾತರಿಪಡಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು. ತೋಳ್‌ಬಲ, ಹಣ, ತಪ್ಪು ಮಾಹಿತಿ ಹಾಗೂ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಈ ನಾಲ್ಕೂ ಅಂಶಗಳನ್ನು ಚುನಾವಣಾ ಆಯೋಗ ಸಶಕ್ತವಾಗಿ ನಿರ್ವಹಿಸಿ, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವದೆಂದು ಆಯುಕ್ತರು ಹೇಳಿದರು. ಮತದಾನದ ದಿನಗಳಂದು ತೋಳ್‌ಬಲದ ಪ್ರಯೋಗದ ಮೇಲೆ ನಿಗಾ ವಹಿಸಲು ಡ್ರೋನ್‌ಗಳನ್ನು ಬಳಸಲಾಗುವುದು. ಮತದಾನ ಸಂದರ್ಭದಲ್ಲಿ ಹಿಂಸಾಚಾರ ಅಥವಾ ಯಾವುದೇ ಅಡ್ಡಿ ಸನ್ನಿವೇಶಗಳನ್ನು ಆಯೋಗ ಕಠಿಣಕ್ರಮಗಳ ಮೂಲಕ ನಿರ್ವಹಿಸಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮದ್ಯ, ನಗದು,

ಉಡುಗೊರೆ, ಮಾದಕ ವಸ್ತುಗಳ ಸಾಗಾಟ ಮತ್ತು ವಿತರಣೆ ತಡೆಗಟ್ಟಲು ಸಂಬಂಧಪಟ್ಟ ಜಾರಿ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ ಅವರು, ಆನ್‌ಲೈನ್ ನಗದು ವರ್ಗಾವಣೆ ಬಗ್ಗೆಯೂ ನಿಕಟ ಎಚ್ಚರಿಕೆ ವಹಿಸುವಂತೆ ತಿಳಿಸಲಾಗಿದೆ ಎಂದರು. ಚುನಾವಣಾ ಸಂದರ್ಭದಲ್ಲಿ ಕಡಿಮೆ ಕಾಗದ ಬಳಕೆ ಹಾಗೂ ತ್ಯಾಜ್ಯ ನಿರ್ವಹಣೆಗೆ ಒತ್ತು ನೀಡುವಂತೆ ನಿರ್ದೇಶನ ನೀಡಲಾಗಿದೆ ಎಂದರು.  ದೇಶಾದ್ಯಂತ ಮತದಾನಕ್ಕೆ ಮುಕ್ತ ವಾತಾವರಣ ಕಲ್ಪಿಸಲು ೨ ಸಾವಿರ ೧೦೦ ವೀಕ್ಷಕರನ್ನು ನಿಯೋಜಿಸಲಾಗುತ್ತದೆ ಎಂದು ಅವರು ತಿಳಿಸಿದರು. ಪ್ರಸಕ್ತ ಲೋಕಸಭೆಯ ಜೂನ್ ೧೬ ರಂದು ಮುಕ್ತಾಯಗೊಳ್ಳಲಿದೆ. ಚುನಾವಣಾ ಆಯುಕ್ತರಾದ ಡಾ.ಎಸ್.ಎಸ್.ಸಂಧು ಹಾಗೂ ಗ್ಯಾನೇಶ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

<><*<><>*><>

ಕೇಂದ್ರ ಚುನಾವಣಾ ಆಯೋಗ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ವೇಳಾಪಟ್ಟಿ ಪ್ರಕಟಿಸಿರುವುದನ್ನು ರಾಜಕೀಯ ಪಕ್ಷಗಳು ಸ್ವಾಗತಿಸಿವೆ. ಹಿರಿಯ ಬಿಜೆಪಿ ನಾಯಕ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬಿಜೆಪಿ ಮತ್ತು ಎನ್‌ಡಿಎ ಚುನಾವಣೆಗೆ ಸಂಪೂರ್ಣವಾಗಿ ಸನ್ನದ್ಧವಾಗಿವೆ ಎಂದು ಹೇಳಿದ್ದಾರೆ. ಎಲ್ಲ ರಂಗಕ್ಕೆ ಉತ್ತಮ ಆಡಳಿತ ಹಾಗೂ ಸೇವೆಯನ್ನು ನೀಡಿದ ಆಧಾರದ ಮೇಲೆ ತಮ್ಮ ಪಕ್ಷ ಜನತೆಯ ಮುಂದೆ ಹೋಗಲಿದೆ ಎಂದು ಅವರು ಸಾಮಾಜಿಕ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಹತ್ತು ವರ್ಷಗಳ ಹಿಂದೆ ತಾವು ಅಧಿಕಾರ ಸ್ವೀಕರಿಸುವ ಮೊದಲು ದೇಶದ ಜನರು ಎಲ್ಲ ಕ್ಷೇತ್ರಗಳಲ್ಲಿ ಹಗರಣ ಹಾಗೂ ನೀತಿಯಲ್ಲಿನ ಸ್ಥಗಿತತೆ ಬಗ್ಗೆ ಬೇಸತ್ತಿದ್ದರು ಎಂದರು. ದೇಶದ ೧೪೦ ಕೋಟಿ ಜನರ ಬೆಂಬಲದಿಂದಾಗಿ ರಾಷ್ಟ್ರ ವಿಶ್ವದಲ್ಲೇ ಐದನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ. ವಿವಿಧ ಕಲ್ಯಾಣ ಯೋಜನೆಗಳ ಮೂಲಕ ಬಡವರನ್ನು ಬಡತನ ರೇಖೆಯಿಂದ ಮೇಲಕ್ಕೆ ತರಲಾಗಿದೆ ಎಂದು ತಿಳಿಸಿದ್ದಾರೆ. ಬಿಜೆಪಿಯ ಅಧ್ಯಕ್ಷ ಜೆ.ಪಿ.ನಡ್ಡಾ, ಪ್ರಜಾ ತಂತ್ರದ ಈ ಉತ್ಸವದಲ್ಲಿ ಎಲ್ಲರೂ ಪಾಲ್ಗೊಂಡು ಮತ ಹಾಕಬೇಕು ಎಂದು ಕೋರಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭಾ ಚುನಾವಣೆ ಭಾರತದ ನ್ಯಾಯದ್ವಾರಗಳನ್ನು ತೆರೆಯಲಿದೆ. ಇದು  ಪ್ರಜಾತಂತ್ರವನ್ನು ಉಳಿಸಲು ಬಹುಷ್ಯಃ ಕೊನೆಯ ಅವಕಾಶ ಎಂದು ಹೇಳಿದ್ದಾರೆ. ಆಮ್‌ಆದ್ಮಿ ಪಕ್ಷದ ನಾಯಕ ಗೋಪಾಲ್ ರೈ, ಸಾರ್ವತ್ರಿಕ ಚುನಾವಣೆಯ ಘೋಷಣೆಯನ್ನು ಸ್ವಾಗತಿಸಿದ್ದು, ಐಎನ್‌ಡಿಐ ಮೈತ್ರಿಯೊಂದಿಗೆ ಚುನಾವಣೆ ಎದುರಿಸಲು ಪಕ್ಷ ಸಿದ್ಧವಾಗಿದೆ ಎಂದು ಹೇಳಿದ್ದಾರೆ.

<><*<><>*><>

ಭ್ರಷ್ಟಾಚಾರ ನಿವಾರಿಸಿ ಅಭಿವೃದ್ಧಿ ಕೈಗೊಳ್ಳಲು ಜನತೆ ಲೋಕಸಭಾ ಚುನಾವಣೆಯಲ್ಲಿ ಬೆಂಬಲ ನೀಡಬೇಕು ಎಂದು ಹಿರಿಯ ಬಿಜೆಪಿ ಧುರೀಣ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಮನವಿ ಮಾಡಿದ್ದಾರೆ. ಅವರು, ಕರ್ನಾಟಕದ ಕಲಬುರಗಿಯಲ್ಲಿಂದು ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿದರು. ’ಆಯುಷ್ಮಾನ್ ಭಾರತ್ ಯೋಜನೆಯಡಿ’

ಕರ್ನಾಟಕದ ೮೦ ಲಕ್ಷ ಜನರು ಪ್ರಯೋಜನ ಪಡೆದುಕೊಂಡಿದ್ದಾರೆ. ಕೊಳಾಯಿ ನೀರು ಒದಗಿಸುವ 'ಜಲಜೀವನ್ ಮಿಷನ್' ಅಡಿ ೭೫ ಲಕ್ಷ ಕುಟುಂಬಗಳು ಹಾಗು ಪಿಎಂ ಆವಾಸ್ ಯೋಜನೆಯಡಿ ೮ ಲಕ್ಷ ಜನರು ಮನೆ ಹಾಗೂ ಉಜ್ವಲ ಯೋಜನೆಯಡಿ ೪೦ ಲಕ್ಷಕ್ಕೂ ಅಧಿಕ ಮಹಿಳೆಯರು ಪ್ರಯೋಜನ ಪಡೆದಿದ್ದಾರೆ. ಕಲಬುರಗಿ-ರಾಯಚೂರು ನಡುವಿನ ಆರು ಪಥದ ಹೆದ್ದಾರಿ ಯೋಜನೆಗಾಗಿ ೬ ಸಾವಿರ ಕೋಟಿ ರೂಪಾಯಿ ಪ್ರಕಟಿಸಲಾಗಿದೆ. ಹುಮ್ನಾಬಾದ್- ಕಲಬುರಗಿ ರೈಲ್ವೆ ಯೋಜನೆ ಘೋಷಿಸಲಾಗಿದೆ. ತೊಗರಿ ಬೇಳೆಗೆ ಬೆಂಬಲ ಬೆಲೆ ಜಾರಿಗೊಳಿಸಲಾಗಿದ್ದು, ಕಲ್ಯಾಣ ಕರ್ನಾಟಕದ ಭಾಗದ ಜನರು ಇದರ ಪ್ರಯೋಜನ ಪಡೆದಿದ್ದಾರೆ ಎಂದರು. ಕರ್ನಾಟಕದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿ ವಿಫಲವಾಗಿದೆ. ದುಷ್ಕರ್ಮಿಗಳಿಗೆ ರಕ್ಷಣೆ ಒದಗಿಸುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದೆ ಎಂದು ಆಪಾದಿಸಿದರು.

<><*<><>*><>

ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷ ಇನ್ನೂ ೨ ನ್ಯಾಯ್ ಗ್ಯಾರಂಟಿ ಘೋಷಿಸಿದೆ. ಬೆಂಗಳೂರಿನಲ್ಲಿಂದು ಸುದ್ದಿಗೋಷ್ಠಿ ನಡೆಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನ್ಯಾಯಯಾತ್ರೆ ನಾಳೆ ಅಂತಿಮವಾಗಲಿದೆ. ಈ ವೇಳೆ ಅವರು ನ್ಯಾಯ್ ವರ್ಗಗಳಲ್ಲಿ ೧೫ ಗ್ಯಾರಂಟಿ ಭರವಸೆಗಳನ್ನು ಘೋಷಿಸಿದ್ದಾರೆ. ಇಂದು ಪಕ್ಷದ ವತಿಯಿಂದ ನಾಲ್ಕನೇದಾದ ಶ್ರಮಿಕನ್ಯಾಯ ಹಾಗೂ ಐದನೇದಾದ ಭಾಗೀದಾರರ ನ್ಯಾಯವನ್ನು ಘೋಷಿಸಿಸುತ್ತಿದ್ದೇವೆ. ಈ ಎಲ್ಲ ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ನಿಗದಿತ ಕಾಲಮಿತಿಯೊಳಗೆ ಜಾರಿಗೊಳಿಸಲಿದೆ ಎಂದರು. ದೇಶದಲ್ಲಿ ಎಲ್ಲರಿಗೂ ನ್ಯಾಯ ಒದಗಿಸುವುದು ಈ ಯಾತ್ರೆಯ ಉದ್ದೇಶವಾಗಿದೆ. ಎನ್‌ಡಿಎ ಸರ್ಕಾರದ ಆಡಳಿತಾವಧಿಯಲ್ಲಿ ಕಾರ್ಮಿಕರ ಕಾಯ್ದೆಯನ್ನು ದುರ್ಬಲಗೊಳಿಸಲಾಗಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

<><*<><>*><>

ಪ್ರಸಾರ ಭಾರತಿಯ ನೂತನ ಅಧ್ಯಕ್ಷರಾಗಿ ಮಾಜಿ ಐಎಎಸ್ ಅಧಿಕಾರಿ ನವನೀತ್ ಕುಮಾರ್ ಸೆಹಗಲ್ ಅವರು ಇಂದು ಅಧಿಕಾರ ವಹಿಸಿಕೊಂಡರು. ಉಪರಾಷ್ಟ್ರಪತಿ ಜಗದೀಪ್ ಧನಕರ್ ನೇತೃತ್ವದ ಪ್ರಸಾರ ಭಾರತಿ ಅಧ್ಯಕ್ಷರ ಆಯ್ಕೆ ಸಮಿತಿ ನವನೀತ್ ಕುಮಾ ಸೆಹಗಲ್ ಅವರ ಹೆಸರನ್ನು ಸೂಚಿಸಿದ ನಂತರ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆದೇಶಕ್ಕೆ ಸಹಿ ಮಾಡಿದ್ದರು. ಯುಪಿ ಕೆಡರ್‌ನ ೧೯೮೮ರ ಬ್ಯಾಚ್‌ನ ನಿವೃತ್ತ ಅಧಿಕಾರಿ ಸೆಹಗಲ್ ಅವರು, ೨೦೨೦ರಲ್ಲಿ ಪ್ರಸಾರ ಭಾರತಿ ಅಧ್ಯಕ್ಷರ ಅವಧಿ ಪೂರ್ಣಗೊಳಿಸಿರುವ ಎ.ಸೂರ್ಯಪ್ರಕಾಶ್ ಅವರ ನಂತರ ಈ ಹುದ್ದೆ ಅಲಂಕರಿಸಿದ್ದಾರೆ.

<><*<><>*><>

ದೆಹಲಿಯಲ್ಲಿ ನಾಳೆ ಮಹಿಳೆಯರ ಪ್ರೀಮಿಯರ್ ಲೀಗ್ ಟಿ-೨೦ ಕ್ರಿಕೆಟ್ ಟೂರ್ನಿಯ ಅಂತಿಮ ಪಂದ್ಯ ನಡೆಯಲಿದ್ದು, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಡೆಲ್ಲಿ

ಕ್ಯಾಪಿಟಲ್ಸ್ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ದೆಹಲಿಯಲ್ಲಿ ನಿನ್ನೆ ರಾತ್ರಿ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವನಿತೆಯರು ೫ ರನ್‌ಗಳಿಂದ ಮುಂಬೈ ಇಂಡಿಯನ್ಸ್ ವಿರುದ್ಧ ರೋಚಕ ಜಯಗಳಿಸಿ, ಫೈನಲ್ ತಲುಪಿದ್ದಾರೆ.

**<><*<><>*><>**

ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದ ರಾಷ್ಟ್ರೀಯ ಆಯೋಗದ ಮಾಜಿ ಸದಸ್ಯ ಹಾಗೂ ಪ್ರಮುಖ ಬೌದ್ಧ ಭಿಕ್ಷು ಲಡಾಖ್‌ನ ಲಾಮಾ ಲೊಬ್‌ಝಾಂಗ್ ನವದೆಹಲಿಯಲ್ಲಿಂದು ನಿಧನ ಹೊಂದಿದರು. ಅವರಿಗೆ ೯೪ ವರ್ಷ ವಯಸ್ಸಾಗಿತ್ತು. ಲಾಮಾ ಲೊಬ್‌ಝಾಂಗ್ ಅವರು, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದ ರಾಷ್ಟ್ರೀಯ ಆಯೋಗದಲ್ಲಿ ಸದಸ್ಯರಾಗಿ ೧೯೮೪ ರಿಂದ ೧೪ ವರ್ಷಗಳ ಕಾಲ ಸತತ ಸೇವೆ ಸಲ್ಲಿಸಿದ್ದರು. ಅವರ ಆರು ದಶಕಗಳ ಸಾರ್ವಜನಿಕ ಸೇವೆಯಲ್ಲಿ ಅನೇಕ ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ, ಬಡವರಿಗೆ ನೆರವಾಗಿದ್ದರು.

**<><*<>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<>*><>**

**<><*<>** ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಿಗ್ಗೆ ೭.೦೫ ಕ್ಕೆ **<>*><>**